ಶ್ರೀ ಕೆ. ಯಂಕಟಪ್ಪ —ಸ್ಥಳವನ್ನು ಪಶಕ್ಕೆ ತೆಗೆದುಕೊಳ್ಳಲಾಗಿದೆ. ಜೊತೆಗೆ ಸಿಬ್ಬಂದಿ ವರ್ಗಕ್ಕೂ ವಸತಿ ಕಟ್ಟಿಸಲು ೧೯೮೧-೮೨ನೇ ಸಾಲಿಗೆ ಅಂದಾಜು ತಯಾರು ಮಾಡಿ ಆಯವ್ಯಯವನ್ನೂ ಒದಗಿಸಲಾಗಿದೆ. ಕಟ್ಟಡ ಕಟ್ಟದೇ ಇರುವುದಕ್ಕೆ ಕಾರಣವೇನೆಂದರೆ ಕಾರಣವೇನೂ ಇಲ್ಲ.

ಶ್ರೀ ಕೆ.ಬಿ. ಶಿವಯ್ಯ —ಇಂದು ಮೈಸೂರಿನ ಖೈದಿಗಳನ್ನು ನಂಜನಗೂಡಿಗೆ ತರುವುದು ಅವಶ್ಯವಿದೆ. ಅಲ್ಲಿ ದನಗಳೂ ಕೂಡ ವಾಸ ಮಾಡಲಿಕ್ಕೆ ಯೋಗ್ಯವಲ್ಲದ ಜಾಗದಲ್ಲಿ ಖೈದಿಗಳನ್ನು ಇಡುತ್ತಿದ್ದಾರೆ. ಆದುದರಿಂದ ನಂಜನಗೂಡಿನಲ್ಲಿ ಸಬ್‌ಜೈಲನ್ನು ಕಟ್ಟಿಸುವುದಕ್ಕಾಗಿ ಜಾಗವನ್ನು ವಶಪಡಿಸಿಕೊಂಡಿದ್ದರೂ ಕಟ್ಟಡ ಕಟ್ಟದೇ ಇರುವುದಕ್ಕೆ ಕಾರಣವೇನೆಂದರೆ ಮಾನ್ಯ ಸಚಿವರು ಕಾರಣವೇನೂ ಇಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಕೆ. ಯಂಕಟಪ್ಪ —ನೌಕರರ ವಸತಿ ಬಗ್ಗೆ ಈ ಒಂದು ಅಂದಾಜು ತಯಾರು ಮಾಡಿ ಒದಗಿಸಲಾಗಿದೆ. ಇದರ ಜೊತೆಗೆ ಜೈಲಿನ ಕಟ್ಟಡವನ್ನು ಕಟ್ಟಿಸಲಿಕ್ಕೆ ಅಂದಾಜು ತಯಾರು ಮಾಡಬೇಕೆಂದು ಲೋಕೋಪಯೋಗಿ ಇಲಾಖೆಯವರಿಗೆ ಆದೇಶ ಕೊಡಲಾಗಿದೆ. ಇದಕ್ಕಾಗಿ ಸ್ವಲ್ಪ ಹಣವನ್ನು ೧೯೮೧-೮೨ನೇ ಸಾಲಿನಲ್ಲಿ ಒದಗಿಸಲಾಗಿದೆ. ಆದುದರಿಂದ ಇದರಲ್ಲಿ ಕಾರಣವೇನೂ ಇಲ್ಲ. ಅಂದಾಜು ತಯಾರಾಗುವುದು ಸ್ವಲ್ಪ ತಡವಾಗಿದೆ. ಅದನ್ನು ಬೇಗ ತಯಾರಿಸಲಿಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಕೆ.ಬಿ. ಶಿವಯ್ಯ.—ಹೊಸದಾಗಿ ನಂಜನಗೂಡಿನಲ್ಲಿ ಕಟ್ಟುವ ಸಬ್‌ಜೈಲಿಗೆ ಬೇರೆ ಕಡೆಯಿಂದ ಆರ್ಕಿಟೆಕ್ಟ್‌ಗಳನ್ನು ಕರೆಸಿ, ಕಟ್ಟಡದ ವಿನ್ಯಾಸವನ್ನು ತಯಾರು ಮಾಡಬೇಕಾಗಿಲ್ಲ. ಯಾವುದೋ ಒಂದು ಊರಿನಲ್ಲಿ ಕಟ್ಟಿರುವ ರೀತಿಯೇ ನಂಜನಗೂಡಿನಲ್ಲೂ ಸಬ್‌ಜೈಲನ್ನು ಕಟ್ಟಬಹುದು. ಆದುದರಿಂದ, ಈ ವರ್ಷ ಆದಷ್ಟು ಬೇಗ ಅಂದಾಜು ತಯಾರು ಮಾಡಿ, ಮುಂದಿನ ವರ್ಷವಾದರೂ ಸಬ್‌ಜೈಲು ಮತ್ತು ನೌಕರರ ವಸತಿ ಗೃಹಗಳನ್ನು ಕಟ್ಟಿಸಲಿಕ್ಕೆ ಮನಸ್ಸು ಮಾಡುತ್ತೀರಾ ?

ಶ್ರೀ ಕೆ. ಯಂಕಟಪ್ಪ.—ಇದಕ್ಕೆ ಉತ್ತರ ಹೇಳಿದ್ದೇನೆ. ಈಗಾಗಲೇ ಇದಕ್ಕೆ ಸುಮಾರು ೩.೭೫ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಜೈಲ್ ಕಟ್ಟುವುದಕ್ಕೆ ಸುಮಾರು ೫ ಲಕ್ಷ ರೂಪಾಯಿಗಳು ಬೇಕಾಗಬಹುದೆಂದು ಹೇಳಲಾಗಿದೆ. ಜೈಲುಗಳನ್ನು ಆಧುನಿಕವಾಗಿ ಕಟ್ಟಬೇಕೆಂಬ ಪ್ರಶ್ನೆ ಇದೆ. ಒಂದು ಮಾದರಿಯಾದ ರೂಪದಲ್ಲಿ ಜೈಲನ್ನು ಕಟ್ಟುವುದಕ್ಕೆ ಸಾಧ್ಯವಿದ್ದರೆ, ಆರ್ಕಿಟೆಕ್ಟ್‌ಗಳನ್ನು ಕರೆಸಬೇಕಾದ ಪ್ರಶ್ನೆ ಬರುತ್ತದೆ.ಆದುದರಿಂದ, ೧೯೮೧-೮೨ನೇ ಸಾಲಿನಲ್ಲಿ ೫ ಲಕ್ಷ ರೂಪಾಯಿಗಳನ್ನು ಒದಗಿಸಿರುವುದರ ಜೊತೆಗೆ ೩.೭೫ ರೂ.ಗಳನ್ನು ನೌಕರರ ವಸತಿ ಗೃಹ ಕಟ್ಟಿಸಲಿಕ್ಕೂ ಒದಗಿಸಿದ್ದೇವೆ. ಇದನ್ನು ಶೀಘ್ರ ಗತಿಯಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

Misappropriation of funds in Co-operative Societies in D.K. Dist.

406. SRI K. RAMA BHAT (Puttur).—Will the Minister for Cof operation be pleased to state :—

(a) the amount misappropriated in the Co-operative Societies o-Dakshina Kannada district of the Karnataka State since 1978 (taluk-wise details may be furnished);

(b) the total number of suits filed in this matter ;

(c) the number of persons convicted and awarded punishments;

(d) the amount recovered from the guilty persons ;

(e) the amount which cannot be recovered ?

SRI H.C. SRIKANTAIAH (Minister for Co-operation).—

(a) Taluk		Amount misappropriated	
Mangalore	...	Rs.	11,12,396-18
Bantwal	...	Rs.	8,143-69
Puttur	...	Rs.	2,59,005-00
Sulya	...	Rs.	15,275-51
Karkala	...	Rs.	9,55,967-35
Udupi	...	Rs.	39,871-98
Belthangadi	...	Rs.	18,639-00
Total	...	Rs.	24,09,298-71

(b) Eleven suits have been filed.

(c) No suit has been finalised in the Court so far.

(d) Rs. 80,569-00 has been recovered.

(e) Since the suits are still pending, the amount due cannot be decided.

ಶ್ರೀ ಕೆ. ರಾಮಭಟ್.—ಈ ತನಕ ಸಹಕಾರಿ ಸಂಘಗಳಲ್ಲಿ ದುರುಪಯೋಗವಾದ ಹಣ ಎಷ್ಟು ಎಂದು ನಾನು ಕೇಳಿದ ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಒಂದು ಪಟ್ಟಿಯನ್ನು ಕೊಟ್ಟಿದ್ದಾರೆ. "ಈ ತನಕ" ಎಂದರೆ ಯಾವ ತಾರೀಖಿನವರೆಗೆ ಎಂದು ನಿರ್ದಿಷ್ಟವಾಗಿ ತಿಳಿಸುವರೆ ?

ಅಧ್ಯಕ್ಷರು.—ಸಾಮಾನ್ಯವಾಗಿ ಪ್ರಶ್ನೆ ಕಳುಹಿಸಿದ ತಾರೀಖಿನ ತನಕ ಎಂದು ಅರ್ಥವಾಗುತ್ತದೆ.

ಶ್ರೀ ಜೆಕ್. ಪಿ. ಶ್ರೀಕಂಠಯ್ಯ.—ಪ್ರಶ್ನೆ ಕಳುಹಿಸಿದ ತಾರೀಖಿನ ದಿವಸದವರೆಗೆ ಆದ ದುರುಪಯೋಗದ ವಿವರಗಳನ್ನು ಕೊಡಲಾಗಿದೆ.

ಶ್ರೀ ಕೆ. ರಾಮಭಟ್.—ನಾನು ಇದನ್ನು ಏತಕ್ಕೆ ಕೇಳುತ್ತಿದ್ದೇನೆಂದರೆ, ನಾನು ಪ್ರಶ್ನೆ ಕಳುಹಿಸಿದ ಮೇಲೆ ಬಹಳಷ್ಟು ದುರುಪಯೋಗವಾಗಿದೆ.

ಅಧ್ಯಕ್ಷರು.—ಅದನ್ನು ತನಿಖೆ ಮಾಡಿಸುತ್ತಾರೆ.

ಶ್ರೀ ಕೆ. ರಾಮಭಟ್.—೧೧ ಮೊಕದ್ದಮೆಗಳನ್ನು ಹೂಡಲಾಗಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಇಷ್ಟಾಗಲ್ಲಿ ಎಷ್ಟು ಸ್ಥಳೀಯಗಳಲ್ಲಿ ಪ್ರೈವೇಟ್ ಮೊಕದ್ದಮೆಗಳನ್ನು ಹೂಡಲಾಗಿದೆ ?

ಶ್ರೀ ಜೆಕ್. ಪಿ. ಶ್ರೀಕಂಠಯ್ಯ.—೧೧ ಮೆ ಬಗ್ಗೆ ಮೊಕದ್ದಮೆಗಳನ್ನು ಹೂಡಲಾಗಿದೆ. ಇವುಗಳಲ್ಲಿ ನಾಲ್ಕರ ಬಗ್ಗೆ ಇನ್ನೂ ತನಿಖೆ ನಡೆಯುತ್ತಿದೆ. ೧೧ ಮೊಕದ್ದಮೆಗಳಲ್ಲಿ ಕೆಲವು ಈಗಾಗಲೇ ಪ್ರಾಸಿಕ್ಯೂಷನ್‌ಗೆ ಆರ್ಡರ್ ಆಗಿದೆ. ಕೆಲವರು ಪ್ರೈಕೋರ್ಟಿಗೆ ಹೋಗಿ ತಡೆಯಾಜ್ಞೆ ತಂದಿದ್ದಾರೆ. ಇನ್ನೂ ಕೆಲವು ಪುಕರಣಗಳ ಕುರಿತು ವಿಚಾರಣೆ ನಡೆಯುತ್ತಿದೆ. ಕೆಲವು ಅರೆಸ್ಟ್ ವಾರೆಂಟ್ ಕೂಡ ಆಗಿದೆ. ಇಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ಎರಡೂ ಕೇಸುಗಳಿವೆ. ಇವುಗಳ ಬಗ್ಗೆ ಎಲ್ಲ ಕ್ರಮಗಳನ್ನೂ ತೆಗೆದುಕೊಳ್ಳಲಾಗಿದೆ.

ಶ್ರೀ ಕೆ. ರಾಮಭಟ್.—ಇದು ಮಾನ್ಯ ಆರ್ಥಿಕಾಭಿವೃದ್ಧಿಗೆ ಸಂಬಂಧಿಸಿದ್ದೆಂದು ನಾನು ಕೇಳಿದ್ದು. ಅಲ್ಲಿ ಸುಮಾರು ೨೪ ಲಕ್ಷಕ್ಕೆಲ್ಲರೆ ರೂಪಾಯಿಗಳಷ್ಟು ರೂಪಾಯಿ ದುರುಪಯೋಗವಾಗಿದೆ.

ಶ್ರೀ ಜೆಕ್. ಪಿ. ಶ್ರೀಕಂಠಯ್ಯ.—ಅದು ನ್ಯಾಯಾಲಯದಲ್ಲಿ ತೀರ್ಮಾನವಾದ ಮೇಲೆ ಗೊತ್ತಾಗುತ್ತದೆ.

ಶ್ರೀ ಬಿ.ಎಂ.ಸೊಪ್ಪಿನ್.—ನನಗೆಲ್ಲಾದ ಮಾಹಿತಿ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಸಹಕಾರ ಕ್ಷೇತ್ರದಲ್ಲಿ ಸುಮಾರು ಒಂದು ಕೋಟಿ ರೂಪಾಯಿಗಳಷ್ಟು ಹಣ ದುರುಪಯೋಗವಾಗಿದೆ. ಆದುದರಿಂದ, ಇದರ ಬಗ್ಗೆ ಸರ್ಕಾರದವರು ನಿಗಾ ಇಡುತ್ತಾರೆಯೆ ? ಹಣ ದುರುಪಯೋಗ ಮಾಡಿ

ದವರ ಮೇಲೆ ಸರ್ಕಾರ ಏನು ಕ್ರಮ ಕೈಗೊಂಡಿದೆ? ಇಲ್ಲಿ ಕೋತಿ ಮೊಸರು ತಿಂದು ಮೇಕೆ ಮೂತಿಗೆ ಒರೆಸಿದಂತಾಗಿದೆ. ಅಲ್ಲಿರುವ ಇಬ್ಬರು-ಮೂವರು ಖಿದೀಮರ ಬಗ್ಗೆ ಹಿಂದೆ ಸರ್ಕಾರದ ಗಮನಕ್ಕೆ ತಂದಿದ್ದೆನು. ಅವರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಅವರ ಮೇಲೆ ಮೊಕದ್ದಮೆಗಳನ್ನು ಹೂಡಿ ಕ್ರಮ ಕೈಗೊಂಡಿದ್ದೀರಾ ?

ಶ್ರೀ ಹೆಚ್. ಸಿ ಶ್ರೀಕಂಠಯ್ಯ.—ಈ ಎಲ್ಲಾ ಪ್ರಕರಣಗಳಿಗೂ ಸಂಬಂಧಿಸಿದಂತೆ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಲಾಗಿದೆ. ಎಲ್ಲ ಪ್ರಕರಣಗಳೂ ಸಹ ನ್ಯಾಯಾಲಯದಲ್ಲಿವೆ. ನ್ಯಾಯಾಲಯದಲ್ಲಿ ಕೆಲವು ಪ್ರಕರಣಗಳು ಡಿಸ್ಮಿ ಆಗಿದ್ದವನ್ನು ಪ್ರಾಪರ್ಟಿ ಅಟ್ಯಾಚ್ ಮಾಡಲಾಗಿದೆ. ಎಲ್ಲಾ ಪ್ರಕರಣಗಳು ನ್ಯಾಯಾಲಯದಲ್ಲಿ ಇತ್ಯರ್ಥವಾದ ಮೇಲೆ ಒಟ್ಟು ಎಷ್ಟು ಹಣ ದುರುಪಯೋಗವಾಗಿದೆ ಎನ್ನುವುದು ಗೊತ್ತಾಗುತ್ತದೆ. ಇಲ್ಲಿಯವರೆಗೆ ನಮ್ಮ ಗಮನಕ್ಕೆ ಬಂದಿರುವಂತೆ ಸುಮಾರು ೨೪ಲಕ್ಷ ರೂಪಾಯಿಗಳಷ್ಟು ಹಣ ದುರುಪಯೋಗವಾಗಿದೆ.

ಶ್ರೀ ಎಚ್. ಡಿ. ಚೌಡಯ್ಯ.—೨೪ ಲಕ್ಷ ರೂಪಾಯಿಗಳು ಒಂದೇ ವರ್ಷದಲ್ಲಿ ದುರುಪಯೋಗವಾಗಿದೆ. ದಕ್ಷಿಣ ಕನ್ನಡ ಜಿಲ್ಲೆ ನಮ್ಮ ರಾಜ್ಯದಲ್ಲಿ ಸಹಕಾರ ಕ್ಷೇತ್ರದಲ್ಲಿ ಬಹಳ ಮುಂದುವರಿದ ಜಿಲ್ಲೆ. ತಾವು ಮೂರು ವರ್ಷಗಳಲ್ಲಿ ೨೪ ಲಕ್ಷ ದುರುಪಯೋಗ ಆಗಿದೆ ಎಂದು ಹೇಳಿದರೆ, ಮಾನ್ಯ ಸದಸ್ಯರು ೧ ಕೋಟಿ ರೂಪಾಯಿ ನಷ್ಟವಾಗಿದೆ ಎಂದು ಹೇಳುತ್ತಾರೆ. ೧೦, ೨೦, ೨೫ ವರ್ಷಗಳಲ್ಲಿ ಈ ರೀತಿ ನಷ್ಟವಾಗಿರುವುದನ್ನು ನೋಡಿದರೆ ಸೊಸೈಟಿಗಳ ಗುಣಮಟ್ಟ ಕೆಳಗಡೆ ಇಳಿದಿದೆ ಅನಿಸುತ್ತದೆ, ಇದಕ್ಕೆ ಮಂತ್ರಿಗಳು ಏನು ಹೇಳುತ್ತಾರೆ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಇಳಿದೇ ಹೋಗಿದೆ.

ಶ್ರೀ ಎಚ್. ಡಿ. ಚೌಡಯ್ಯ.—೨೪ ಲಕ್ಷ ರೂಪಾಯಿಗಳು ಮಾರ್ಕೆಟ್‌ನಿಂದ ಜಿಲ್ಲಾ ಬ್ಯಾಂಕ್, ಅರ್ಬನ್ ಬ್ಯಾಂಕ್ ಸರ್ವೀಸ್ ಸೊಸೈಟಿಗಳು ಮತ್ತು ಸೆಲ್‌ಗಳು ಯಾವಯಾವುದು ಎಷ್ಟೆಷ್ಟು ಎಂದು ಕೊಡುವುದಕ್ಕೆ ಸಾಧ್ಯವೇ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ನನ್ನ ಹತ್ತಿರ ಲಿಸ್ಟ್ ಇದೆ. ೧೫ ಸೊಸೈಟಿಗಳು ಜಿಲ್ಲಾ ಬ್ಯಾಂಕ್‌ಗಳು ೧೯೭೩ನೇ ಇಸವಿಗಳಿಂದಲೂ ಸಹ ಅದೇ ಸಾಲವನ್ನು ಪುನರಾವರ್ತನೆ, ಮಾಡಿ ಸಂಸ್ಥೆಗಳಿಗೆ ದುಡ್ಡು ಸಂದಾಯವಾಗಿಲ್ಲ. ಸಾಲವನ್ನು ಜಿಲ್ಲಾ ಬ್ಯಾಂಕಿನವರು ಮಂಜೂರು ಮಾಡಿದ್ದಾರೆ. ಆದರೆ, ಸೇರಬೇಕಾದವನಿಗೆ ಮುಟ್ಟಿಲ್ಲ. ಸೊಸೈಟಿಗಳಲ್ಲಿ ಪ್ರತಿಯೊಂದನ್ನು ಬಿಡಬೇಡದೆಂದೂ ಆಡ್ಜೆಸ್ಟ್ ಮಾಡಿದ್ದಾರೆ, ಇದು ೧೯೭೩ನೇ ಇಸವಿಯಿಂದಲೂ ನಡೆದಿದೆ. ಉದಾಹರಣೆಗೆ ಚಿತ್ರದುರ್ಗ ಒಂದರಲ್ಲೇ ೧೦ ಲಕ್ಷ ರೂಪಾಯಿಗಳು ದುರುಪಯೋಗ ನಡೆದಿದೆ. ಚಿತ್ರದುರ್ಗ ಸೊಸೈಟಿಯ ಕಾರ್ಯದರ್ಶಿ ಅಬ್‌ಸ್ಕಾಂಡ್ ಆಗಿದ್ದಾನೆ. ಈ ತರಹ ಎಲ್ಲಾ ಕಡೆ ಆಗುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆ ಸಹಕಾರ ಕ್ಷೇತ್ರದಲ್ಲಿ ಬಹಳ ಹೆಸರುವಾಸಿ. ಇದು ಬಹಳ ಚೆನ್ನಾಗಿದೆ.

ಶ್ರೀ ಎ. ಜಿ. ಕೊಡಗಿ.—ಹಣ ದುರುಪಯೋಗದ ಬಗ್ಗೆ ಸಂಖ್ಯೆ ಕೊಟ್ಟಿದ್ದೀರಿ ಹಣ ದುರುಪಯೋಗ ಆಗಿದೆ ಎಂದು ಯಾವ ದಿನಾಂಕ ಆರ್ಜಿಗಳು ಬಂದವು? ಅವುಗಳ ಸಂಖ್ಯೆ ಎಷ್ಟು ? ಅಂದಾಜು ಮೌಲ್ಯ ಎಷ್ಟು ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಹಣ ದುರುಪಯೋಗದ ಆಂಕಿಸಂಖ್ಯೆ ಕೊಡಲಾಗಿದೆ. ದಿನಾಂಕದ ಬಗ್ಗೆ ಬೇಕಾದರೆ, ಬೇರೆ ಪ್ರಶ್ನೆ ಹಾಕಿ ಉತ್ತರ ಒದಗಿಸುತ್ತೇನೆ.

ಶ್ರೀ ಕೆ. ರಾಮಭಟ್,—ಒಬ್ಬ ಕಾರ್ಯದರ್ಶಿ ಹಣ ದುರುಪಯೋಗದ ಬಗ್ಗೆ ಬೋರ್ಡ್ ತೀರ್ಮಾನದಂತೆ ಸಸ್ಪೆಂಡ್ ಮಾಡಿದರು. ಈ ರೀತಿ ಸಸ್ಪೆಂಡ್ ಆದ ಕಾರ್ಯದರ್ಶಿಗೆ ಸ್ಟೇ ಮಾಡಿ ರಕ್ಷಣೆ ಕೊಟ್ಟಿದ್ದೀರಿ ಇದು ಸರಿಯೇ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ನನಗೆ ಜ್ಞಾಪಕ ಇಲ್ಲ.

ಅಧ್ಯಕ್ಷರು.—ಕಾನೂನು ಪ್ರಕಾರ ಕೊಡಬೇಕಾದವರಿಗೆ ಕೊಡಬೇಕಾಗುತ್ತದೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಕೋರ್ಟ್ ಯಾವ ರೀತಿ ಸ್ಟೇ ಕೊಟ್ಟಿದೆಯೋ ಗೊತ್ತಿಲ್ಲ.

ಅಧ್ಯಕ್ಷರು.—ಪಕೀಲರಿಗೆ ಸರಿಯಲ್ಲವೆಂದು ಕಂಡು ಬಂದರೆ, ಅದನ್ನು ತಪ್ಪು ಸ್ಟೇಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಸ್ಪೀ ಕೊಟ್ಟ ತಕ್ಷಣ ತಪ್ಪಿಸಿಕೊಳ್ಳಬಹುದು ಎನ್ನುವ ಅರ್ಥವಲ್ಲ, ಜೋರ್ಡ್‌ವವರೇ ದುಡ್ಡು ತಿಂದು ಸೆಕ್ರೆಟರಿಯು ಬೇರೆ ಹಾಕಿದ್ದಾರೆ, ಅವನಿಗೆ ರಕ್ಷಣೆ ಕೊಡತಕ್ಕವರು ಯಾರು? ತಾವು ಹೇಳಿದ್ದೀರಿ, ಇನ್ನೊಬ್ಬರು ಏನು ಹೇಳುತ್ತಾರೆ ಕೇಳಿ?.

ಶ್ರೀ ಕೆ. ರಾಮಭಟ್.—ನಮ್ಮ ಜಿಲ್ಲೆಯಲ್ಲಿ ೧ ಕೋಟಿ ರೂಪಾಯಿಗಳ ದುರುಪಯೋಗದ ಅಪಾದನೆಯ ಬಗ್ಗೆ ಸಮಗ್ರವಾದ ಎನ್‌ಕ್ವಾಯರಿ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಭಟ್‌ರವರ ಪರ್‌ಸನಲ್ ಕೇಸ್ ಇರಬೇಕು. ದುಡ್ಡು ತಿಂದಿರುವವರು ಬೇರೆ, ನನಗೇನು ಕಾರ್ಯದರ್ಶಿಯನ್ನು ಉಳಿಸಬೇಕೆಂದೇನು ಇಲ್ಲ. ಮಂಡಳಿಯವರು ಹೇಳುವುದನ್ನು ಕೇಳಬೇಕು, ಕಾರ್ಯದರ್ಶಿ ಹೇಳುವುದನ್ನು ಕೇಳಬೇಕು ಎಲ್ಲಿ ಅನ್ಯಾಯವಾಗಿರುತ್ತದೋ, ವಿಚಾರಣೆ ಮಾಡಿದಾಗ ಅವರು ಶಿಕ್ಷೆಗೆ ಅರ್ಹರಾಗುತ್ತಾರೆ.

Karnataka Secooters Ltd. at Somanahalli in Mandya Dist.

432 SRI M. S. ATMANANDA (Mandya).—Will the Chief Minister be pleased to State.—

(a) when the Karnataka Scooters Limited situated at Somanahalli, Mandya district have commenced production,

(b) the production capacity of this factory,

(c) the profit earned by the said company since its inception,

(d) the capital invested in this company,

(e) the sources of capital ?

SRI R. GUNDU RAO (Chief Minister).—

(a) 1-9-1976

(b) 24,000 scooters per year.

(c) The company has not earned any income since its inception.

(d) Rs. 294.94 lakhs.

(e) 1. I.C.I.C.I.
2. I.D.B.I.
3. I.F.C.
4. L.I.C.
5. K.S.I.I.D.C.

Secured Loans		Rs. in lakh
I.D.B.I.	...	122.00
I.F.C.I.	...	37.00
I.C I.C.I.	...	36.32
L.I.C.	...	37.00
	Total	232.32